ಅ.ದಾ. ಸಂಃ 274/2017 ಪಿ.ಡಬ್ಲ್ಯು: 01
ನಾರಾಯಣಪ್ಪ

ದಿಃ 10-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಜೆ.ಕೆ. ಪ್ರತಿವಾದಿ ಪರ ವಕೀಲರಿಂದಃ

ಪ್ರತಿವಾದಿ ವಿರುದ್ಧ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿ ನನಗೆ ಪರಿಚಯವಿಲ್ಲ ಅವರ ಹಣ ಕೇಳಿದ ಕಾರಣ ನಾನು ಹಣವನ್ನು ನೀಡಿರುತ್ತೇನೆ. 2015 ರಲ್ಲಿ ತಾಲ್ಲೂಕು ಕಚೇರಿಯಲ್ಲಿ ನಾನು ಹಣವನ್ನು ನೀಡಿರುತ್ತೇನೆ ದಿನಾಂಕ ನೆನಪಿಲ್ಲ. ಹಣ ನೀಡಿರುವ ಸಮಯದಲ್ಲಿ ಸುಧಾಕರ್ ರೆಡ್ಡಿ, ಪ್ರಕಾಶ್ ಹಾಜರಿದ್ದರು. ನಾನು ಪ್ರತಿವಾದಿ ರೂ. 70,000/-ಗಳನ್ನು ನೀಡಿರುತ್ತೇನೆ. ನನಗೆ ಲೆಕ್ಕ ಹಾಕಲು ಬರದೇ ಇರುವ ಕಾರಣ, ನಾನು ಸುಧಾಕರ್ ರೆಡ್ಡಿಗೆ ಹಣವನ್ನು ನೀಡಿ ಸುಧಾಕರ್ ರೆಡ್ಡಿ, ಪ್ರತಿವಾದಿಗೆ ಹಣವನ್ನು ಕೊಟ್ಟಿರುತ್ತಾರೆ. ತಾಲ್ಲೂಕು ಕಚೇರಿಯ Stamp ಬರಹಗಾರರ ಕಚೇರಿಯಲ್ಲಿ ಹಣವನ್ನು ನೀಡಿದ್ದೇನೆ. Stamp ಬರಹಗಾರರ ಹೆಸರು ಪ್ರಕಾಶ್ ಆಗಿರುತ್ತದೆ. ಛಾಪಾಕಾಗದವನ್ನು ಬರೆಯಿಸಿಕೊಂಡು ನಾನು ಹಣವನ್ನು ನೀಡಿರುತ್ತೇನೆ. ನಿಪಿ-4 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನಿಪಿ-4 ರಲ್ಲಿ, ನಾನು, ಸುಧಾಕರ್ ರೆಡ್ಡಿ, ಪ್ರತಿವಾದಿ ಮತ್ತು Stamp ಬರಹಗಾರರ ಪ್ರಕಾಶ್ ಸಹಿಯನ್ನು ಮಾಡಿರುತ್ತೇವೆ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಛಾಪಾಕಾಗದ ಮುಖಬೆಲೆ ರೂ. 20/- ಪ್ರತಿವಾದಿ ತಂದಿರುತ್ತಾರೆ. ಪ್ರತಿವಾದಿ 3 ವರ್ಷದ ಒಳಗೆ ಹಣವನ್ನು ಮರು ಪಾವತಿ ಮಾಡುತ್ತೇನೆ ಎಂದು ಹೇಳಿದರು, ಸಾಕ್ಷಿಯು ಮುಂದುವರೆದು ಒಂದು ವರ್ಷಕ್ಕೆ ಬಡ್ಡಿಯನ್ನು ಸಹಾ ನೀಡುತ್ತೇನೆ ಎಂದು ಹೇಳಿರುತ್ತಾರೆ. ಇಲ್ಲಿಯವರೆಗೂ ಅಸಲು ಮತ್ತು ಬಡ್ಡಿಯನ್ನು ಪ್ರತಿವಾದಿ ನೀಡಿರುವುದಿಲ್ಲ. ಅದೇ ದಿನ ನಿಪಿ-4 ಅನ್ನು ನೊಂದಾಯಿತಿ ಮಾಡಿಸಲು ತೊಂದರೆ ಇರಲಿಲ್ಲ. ಬಡ್ಡಿ ಮತ್ತು ಅಸಲು ನೀಡದೇ ಇರುವ ಕಾರಣ ನಾನು ದಾವೆಯನ್ನು ಹೂಡಿರುತ್ತೇನೆ. ನಿಪಿ-4 ಕ್ಕು ನೊಂದಾಯಿತಿ ದಾಖಲಾತಿ ಅಲ್ಲ ಎಂದರೆ ಸರಿ. ಪ್ರತಿವಾದಿಗೆ ಹಣ ನೀಡಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ ನನ್ನ ಬಳಿ ಹಣ ಕೇಳಿಲ್ಲವೆಂದರೆ ಸರಿಯಲ್ಲ. ನಿಪಿ-4 ಅನ್ನು ನಾನು ಬರೆಯಿಸಿಲ್ಲವೆಂದರೆ ಸರಿಯಲ್ಲ. ನಿಪಿ-4 ಅನ್ನು ಸೃಷ್ಟಿಮಾಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು